ಸಾಹಿತ್ಯ :

ರೂ. 250ರಂತೆ 41 ಜನ

ರೂ. 500ರಂತೆ 12 ಜನ

ಜಾನಪದ ಮತ್ತು ಯಕ್ಷಗಾನ :

ರೂ. 250ರಂತೆ 106 ಜನ

ರೂ. 500ರಂತೆ 06 ಜನ

ಅ) 1987-88ನೇ ಸಾಲಿನಿಂದ

ಇ) ಪರಿಶೀಲಿಸಲಾಗುತ್ತಿದೆ.

ಈ) 1990-91ನೇ ಸಾಲಿನವರೆಗೆ :

1. ಕ್ರೀಡಾಪಟುಗಳಿಂದ195 ಅರ್ಜಿಗಳು

2. ಸಾಹಿತಿಗಳು,ಜಾನಪದ, ಯಕ್ಷಗಾನ ಮುಂತಾದ ಕಲಾವಿದರುಗಳಿಂದ 3150 ಅರ್ಜಿಗಳು.

ಆನೇಕಲ್ ತಾಲೋಕಿನಲ್ಲಿ ಮಿನಿ ಸ್ಟೇಡಿಯಂ ಸ್ಥಾಪನೆ ಬಗ್ಗೆ

544 - ಶ್ರೀ ಎಂ.ಪಿ. ಕೇಶವಮೂರ್ತಿ (ಆನೇಕಲ್) : ಮಾನ್ಯ ಯುವಜನ ಸೇವಾ ಕ್ರೀಡಾ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಆನೇಕಲ್ ತಾಲ್ಲೂಕಿನಲ್ಲಿ ಮಿನಿ ಸ್ಟೇಡಿಯಂ ಸ್ಥಾಪಿಸಲು ಸರ್ಕಾರದವರು ಯೋಚಿಸಿದ್ದಾರೆಯೇ:

ಆ) ಹಾಗಿದ್ದಲ್ಲಿ, ಈ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಎಸ್. ರಮೇಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಸಚಿವರು)

ಅ) ಪರಿಶೀಲನೆಯಲ್ಲಿದೆ

ಆ) ಉದ್ಭವಿಸುವುದಿಲ್ಲ.

ಕೋಲಾರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಅಭಿವೃದ್ಧಿ ನಿಗಮವು ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ

868 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ): ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990-91ನೇ ಸಾಲಿನಲ್ಲಿ ಕೋಲಾರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವು ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದೆ;

ಆ) ಇದಕ್ಕಾಗಿ ವೆಚ್ಚವಾದ ಹಣವೆಷ್ಟು ?

ಇ) ಇದರಿಂದಾಗಿ ಜಿಲ್ಲೆಯ ಎಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿಗೆ ಅನುಕೂಲವಾಗಿದೆ

ಈ) ನಿಗಮವು ಈ ವರ್ಷ ಯಾವ ಯಾವ ಕಾರ್ಯಕ್ರಮಗಳನ್ನು ಜಿಲ್ಲೆಯಲ್ಲಿ ಕೈಗೊಳ್ಳಲು ನಿರ್ಧರಿಸಿದೆ?

ಉ) ಇದಕ್ಕಾಗಿ ಮೀಸಲಾಗಿಟ್ಟಿರುವ ಹಣವೆಷ್ಟು ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು) :

ಅ)1) ಸಹಾಯಧನ ಯೋಜನೆ

2) ಸಹಾಯಧನ ಹಾಗೂ ಬೀಜಧನ ಯೋಜನೆ

3) ವೈಯಕ್ತಿಕ ನೀರಾವರಿ ಕೊಳವೆ ಬಾವಿ

4) ಲಘು ವಾಹನ ಚಾಲನಾ ತರಬೇತಿ

5) ನೇಯ್ಗೆ ತರಬೇತಿ

ಆ)	ಸಹಾಯಧನವಾಗಿ	ರೂ. 18.02 ಲಕ್ಷ
	ಬೀಜಧನ ಸಾಲವಾಗಿ	ರೂ. 1.31 ಲಕ್ಷ
	ಒಟ್ಟು	**ರೂ. 19.33 ಲಕ್ಷ**

ಇ) 818

ಈ) ಪ್ರಶ್ನೆ (ಅ)ಕ್ಕೆ ನೀಡಿರುವ ಉತ್ತರದಲ್ಲಿರುವಂತೆ

ಉ)	ಸಹಾಯಧನವಾಗಿ	ರೂ.20.50 ಲಕ್ಷ
	ಬೀಜಧನ ಸಾಲವಾಗಿ	ರೂ.22.75 ಲಕ್ಷ
	ಒಟ್ಟು	**ರೂ.43.25 ಲಕ್ಷ**

ರಾಜ್ಯದಲ್ಲಿರುವ ಹರಿಜನ-ಗಿರಿಜನ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿಸಿರುವ ಬಗ್ಗೆ

549 - ಶ್ರೀ ಎಂ.ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ ?

ಅ) ರಾಜ್ಯದಲ್ಲಿ ಹರಿಜನ ಗಿರಿಜನ ವಿಶೇಷ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಇದುವರೆವಿಗೂ ಎಷ್ಟು ಜನ ವಿದ್ಯಾರ್ಥಿಗಳು ಹೆಸರನ್ನು ನೊಂದಾಯಿಸಿಕೊಂಡಿರುತ್ತಾರೆ?

ಆ) ಹೆಸರು ನೊಂದಾಯಿಸಿರುವವರಲ್ಲಿ ಇದುವರೆವಿಗೂ ಎಷ್ಟು ಜನಕ್ಕೆ ಉದ್ಯೋಗ ದೊರಕಿದೆ ?

ಇ) ಈಗಿರುವ ಪ್ರಾದೇಶಿಕ ಉದ್ಯೋಗ ವಿನಿಮಯ ಕಛೇರಿಯಲ್ಲಿ ಹೆಸರು ನೊಂದಾಯಿಸಿರುವ ಹರಿಜನ:ಗಿರಿಜನ ವಿದ್ಯಾರ್ಥಿಗಳನ್ನು ವಿಶೇಷ ಹರಿಜನ:ಗಿರಿಜನ ಉದ್ಯೋಗ ವಿನಿಮಯ ಕೇಂದ್ರಕ್ಕೆ ಬದಲಾಯಿಸಿ ಎಲ್ಲಾ ಹರಿಜನ:ಗಿರಿಜನ ನಿರುದ್ಯೋಗಿಗಳಿಗೆ ಒಂದೇ ಕಡೆ ಹೆಸರು ನೊಂದಾಯಿಸುವ ಆಲೋಚನೆ ಸರ್ಕಾರದ ಮುಂದೆ ಇದೆಯೆ ?

ಈ) ಇಲ್ಲದಿದ್ದಲ್ಲಿ ಕಾರಣವೇನು ?

ಶ್ರೀ ಸಿ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು)

ಅ) 1990ನೇ ಡಿಸೆಂಬರ್ ಅಂತ್ಯಕ್ಕೆ 11,635 ಪರಿಶಿಷ್ಟ ಜಾತಿ ಮತ್ತು 3,516 ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳು ಹೆಸರನ್ನು ನೊಂದಾಯಿಸಿಕೊಂಡಿರುತ್ತಾರೆ.

ಆ) 1,165

ಇ) ಇಲ್ಲ

ಈ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿಶೇಷ ಉದ್ಯೋಗ ವಿನಿಮಯ ಕಛೇರಿಯು ಇತರ ಉದ್ಯೋಗ ವಿನಿಮಯ ಕೇಂದ್ರಗಳ ಸಹಯೋಗದಿಂದ ಕಾರ್ಯನಿರ್ವಹಿಸುತ್ತಿರುವುದರಿಂದ ಪ್ರಾದೇಶಿಕ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ